# ಜಯ ಮಂಗಳಂ - ಗುರು ಭಕ್ತಿಯೆಂತೆಂಬ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
3. **Note:** Lyrics mentioned here are as per Ref. 1. The wordings in Ref. 2 are almost same as in Ref. 1. Few differences are there but are not considered here.
4. **Note:** Singer has followed these lyrics.

ರಾಗ: ಭೈರವಿ ತಾಳ: ಛಾಪು

ಜಯ ಮಂಗಳಂ ನಿತ್ಯ ಶುಭ ಮಂಗಳಂ ॥ ಪ ॥

ಗುರು ಭಕ್ತಿಯೆಂತೆಂಬ ಗಮಕದೋಲೆಯನಿಟ್ಟು
ಹರಿ ಧ್ಯಾನವೆಂಬ ಆಭರಣವಿಟ್ಟು
ಪರತತ್ವವೆಂತೆಂಬ ಪಾರಿಜಾತವ ಮುಡಿದು
ಪರಮಾತ್ಮ ಹರಿಗೆ ಆರತಿಯೆತ್ತಿರೆ ॥ ೧ ॥

ಆದಿ ಮೂರುತಿಯೆಂಬ ಅಚ್ಚ ಅರಿಶಿಣ ಬಳೆದು
ವೇದಮುಖನೆಂಬ ಕುಂಕುಮವನಿಟ್ಟು
ಸಾಧು ಸಜ್ಜನ ಸೇವೆಯೆಂಬ ಸಂಪಿಗೆ ಮುಡಿದು
ಮೋದದಿಂ ಲಕ್ಷ್ಮೀಗಾರತಿಯೆತ್ತಿರೆ ॥ ೨ ॥

ತನುವೆಂಬ ತಟ್ಟೆಯಲಿ ಮನ ಸೊಡರನು ಇಡಿಸಿ
ಘನ ಶಾಂತಿಯೆಂಬ ಆಜ್ಯವನು ತುಂಬಿ
ಆನಂದವೆಂತೆಂಬ ಬತ್ತಿಯನು ಹಚ್ಚಿಟ್ಟು
ಚಿನುಮಯ ಹರಿಗೆ ಆರತಿಯೆತ್ತಿರೆ ॥ ೩ ॥

ಕಾಮಾಂಧವಳಿದಂಥ ಕಮಲದ ತಟ್ಟೆಯಲಿ
ನೇಮವೆಂತೆಂಬ ಹರಿದ್ರುವನು ಕದಡಿ
ಆ ಮಹಾ ಸುಜ್ಞಾನವೆಂಬ ಸುಣ್ಣವ ಬೆರೆಸಿ
ಸೋಮಧರ ವರದಗಾರತಿಯೆತ್ತಿರೆ ॥ ೪ ॥

ನಾರದ ವಂದ್ಯಗೆ ನವನೀತ ಚೋರಗೆ
ನಾರಾಯಣಗೆ ಶ್ರೀ ವರಲಕ್ಷ್ಮಿಗೆ
ಸಾರಿದವರನು ಪೊರೆವ ಪುರಂದರ ವಿಠ್ಠಲಗೆ
ನೀರಜ ಮುಖಿಯರಾರತಿಯೆತ್ತಿರೆ ॥ ೫ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಮಾನಸಪೂಜಾ ಪ್ರಕಾರಕ್ಕೆ ಸೇರಿದ ಪದ; ಅರ್ಚನೆಯ ಸಾಂಪ್ರದಾಯಿಕ ವಿಧಿಗಳನ್ನು ಸಾಂಕೇತಿಕವಾಗಿ ಗ್ರಹಿಸಿ, ಪೂಜೆಯ ನಂತರ ಆರತಿ ಎತ್ತುವ ಬಗೆಯನ್ನು ಸೊಗಸಾಗಿ ಬಣ್ಣಿಸಿದ್ದಾರೆ. ಹರಿಯನ್ನು ಪರಮಾತ್ಮನೆಂದು ಕರೆದು ಬಿಂಬ ಭಾವವನ್ನು ಸೂಚಿಸಿದ್ದಾರೆ. ಹರಿಯೇ ಸರ್ವೋತ್ತಮನೆಂಬ ತತ್ತ್ವ ಹೂವು; ಸಾಧಕನ ಶರೀರವೇ ಆರತಿಯ ತಟ್ಟೆ; ಮನಸ್ಸೇ ಅದರಲ್ಲಿರಿಸಿದ ದೀಪ (ಸೊಡರು); ಸಮಾಧಾನವೆಂಬುದು ತುಪ್ಪ (ಆಜ್ಯ); ಆನಂದವೆಂಬುದೇ ಬತ್ತಿ. ಈ ಆರತಿಯನ್ನು ಪಡೆದುಕೊಳ್ಳುವ ಹರಿ ಚಿನ್ಮಯ.

ಆರತಿ ಎತ್ತುವವರು ವಿಶೇಷವಾಗಿ ಸುಮಂಗಳೆಯರೇ. ಮಂಗಳೆಯರ ಅಲಂಕಾರಗಳನ್ನು ಭಕ್ತನ ಒಂದೊಂದು ಸದ್ಗುಣಕ್ಕೆ ಹೋಲಿಸಿ ಇದರಲ್ಲಿ ಹೇಳಿದ್ದಾರೆ.

**ಗಮಕ** = ಸೌಂದರ್ಯ ಸೂಚಕ ಕ್ರಿಯೆ

**ಆಜ್ಯ** = ತುಪ್ಪ

**ಹರಿದ್ರು** = ಅರಿಶಿಣ

**ಕದಡಿ** = ಕಲಕಿ (ಕಡದಾರತಿ ಕದಲಾರತಿಯಾಗಿದೆ).

**Classification:** Keerthane
**Ankita:** purandara vittala
**Location:** NA
**Category:** mangala song, Bhakti
**Sub-Category:** mangala, Krishna, arati, parijatha, paramatma, veda, sadhu, Lakshmi, jana, mana, Ananda, padma, jnana, narada, benne, kalla, Narayana,
**Pravachana:** NA
**Explanation:** NA